International Journal of Kannada Research
www.kannadajournal.com

**ISSN: 2454–5813**
IJKR 2019; 5(1): 93-96
© 2019 IJKR
www.kannadajournal.com
Received: 28-11-2018
Accepted: 30-12-2018

**ರೇಖಾ ಕೆ. ಜಾದವ್**
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು

**ಮೇಘ ಆರ್**
ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ಕೇಂದ್ರ, ಮಹಿಳಾ ಸರ್ಕಾರಿ ಕಾಲೇಜು, (ಸ್ವಯತ್ತ), ಮಂಡ್ಯ

**ಮತ್ತು ವೈ. ಕೆ. ಭಾಗ್ಯ**
ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ಕೇಂದ್ರ, ಮಹಿಳಾ ಸರ್ಕಾರಿ ಕಾಲೇಜು, (ಸ್ವಯತ್ತ), ಮಂಡ್ಯ

**Correspondence**
**ಮತ್ತು ವೈ. ಕೆ. ಭಾಗ್ಯ**
ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ಕೇಂದ್ರ, ಮಹಿಳಾ ಸರ್ಕಾರಿ ಕಾಲೇಜು, (ಸ್ವಯತ್ತ), ಮಂಡ್ಯ

# ಪೌರ ಕಾರ್ಮಿಕರ ಸ್ಥಿತಿಗತಿ: ಮಂಡ್ಯ ನಗರಕ್ಕೆ ಸಂಬಂಧಿಸಿದಂತೆ ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ರೇಖಾ ಕೆ. ಜಾದವ್, ಮೇಘ ಆರ್, ಮತ್ತು ವೈ. ಕೆ. ಭಾಗ್ಯ**

**ಸಾರಲೇಖ:**
ಈ ಲೇಖನವು ಮಂಡ್ಯನಗರದಪೌರಕಾರ್ಮಿಕರ ಕುರಿತು ಒಂದು ವಿಶ್ಲೇಷಣೆ. ಈ ಲೇಖನವುಪೌರಕಾರ್ಮಿಕರಆರೋಗ್ಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡುವುದು ಹಾಗೂ ಅದನ್ನು ನಿಭಾಯಿಸಲು ಸಲಹೆಗಳನ್ನು ತಿಳಿಸುವ ಉದ್ದೇಶ ಹೊಂದಿದ್ದು, ಮಂಡ್ಯ ನಗರದಲ್ಲಿಕಾರ್ಯನಿರ್ವಹಿಸುತ್ತಿರುವ 50 ಪೌರಕಾರ್ಮಿಕರನ್ನುಸರಳಯಾದೃಚ್ಛಿಕ ವಿಧಾನದ ಮೂಲಕ ಆಯ್ಕೆಮಾಡಿ ಸ್ವರಚಿತ ಪ್ರಶ್ನಾವಳಿಯನ್ನು ಬಳಸಿಕೊಂಡು ಸಂದರ್ಶನ ಮಾಡುವ ಮೂಲಕ ಅಧ್ಯಯನ ಮಾಡಲಾಗಿದ್ದು ಪೌರಕಾರ್ಮಿಕರ ಆರೋಗ್ಯ, ಶೈಕ್ಷಣಿಕ ಸ್ಥಿತಿಗತಿಹಾಗೂ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಅಧ್ಯಯನದಲ್ಲಿ ಕಂಡುಕೊಂಡಿದ್ದು ಈ ಸಮಸ್ಯೆಗಳನ್ನು ನಿಭಾಯಿಸಲು ಕೆಲವು ಸಲಹೆಗಳನ್ನು ನೀಡಲಾಗಿದೆ. ಪೌರಕಾರ್ಮಿಕರುನಗರದ ಸ್ವಚ್ಚತೆ ಹಾಗೂ ನಗರವಾಸಿಗಳ ಆರೋಗ್ಯಸಬಲೀಕರಣ ಮಾಡುವ ಮೂಲಕ ರಾಷ್ಟ್ರದ ಅಭಿವೃದ್ದಿಗೆ ಕಾರಣರಾದ ಇವರು ಅನಾರೋಗ್ಯಕ್ಕೆ ಒಳಗಾಗಬಾರದು ಎಂಬುದರ ಬಗ್ಗೆ ಈ ಅಧ್ಯಯನ ಬೆಳಕು ಚೆಲ್ಲುತ್ತದೆ.

**ಪ್ರಮುಖ ಪದಗಳು**: ಪೌರಕಾರ್ಮಿಕ, ನಗರವಾಸಿ, ಆರೋಗ್ಯ ಸಬಲೀಕರಣ.

**ಪೀಠಿಕೆ:**
ನಗರಗಳು ಆಕರ್ಷಕ, ಸುಂದರ, ರಮಣೀಯವಾಗಿ ಕಾಣಲು ಅಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರ ಪಾತ್ರ ಅಪಾರವಾದುದು.ನಗರಗಳ ಸ್ವಚ್ಚತೆಯನ್ನು ಮಾಡುವ ಮೂಲಕ ನಗರದ ಜನರ ಆರೋಗ್ಯ ರಕ್ಷಣೆಮಾಡುತ್ತ ನಗರದ ಜನರ ಆರೋಗ್ಯ ಕಾಯ್ದುಕೊಳ್ಳುವುದರಿಂದ ಆರೋಗ್ಯವಂತ ಪ್ರಜೆಗಳನ್ನಾಗಿಸುವ ಕಾರ್ಯದಿಂದ ನಗರ ಜನರ ದುಡಿಯುವ ಶಕ್ತಿಯನ್ನು ಕಾಯ್ದುಕೊಳ್ಳುವ ಮೂಲಕ ದೇಶದ ಅಭಿವೃದ್ಧಿಯಲ್ಲಿ ಇವರ ಪಾತ್ರ ಗಣನೀಯವಾದುದು.ಹಾಗಾಗಿ ಇವರ ವೃತ್ತಿಯ ಬಗ್ಗೆ ಸಾರ್ವಜನಿಕ ಅಭಿಪ್ರಾಯದ ಕುರಿತು ಹಾಗೂ ಪೌರಕಾರ್ಮಿಕರ ಜೀವನ, ಶಿಕ್ಷಣ, ವೃತ್ತಿ, ಆರೋಗ್ಯ, ಆರ್ಥಿಕ-ಸಾಮಾಜಿಕ ಸ್ಥಿತಿ, ಸಾಮಾಜಿಕ ಚಲನೆ,ಅವರ ಸಮಸ್ಯೆಗಳನ್ನು ಕುರಿತು ತಿಳಿಯುವ ದೃಷ್ಟಿಯಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.ಮಂಡ್ಯ ನಗರದಲ್ಲಿ ಕಾರ್ಯನಿರ್ವಹಿಸುತ್ತರುವ ಪೌರಕಾರ್ಮಿಕರಲ್ಲಿ 50 ಮಾಹಿತಿದಾರರಿಂದಸರಳಯಾದೃಚ್ಛಿಕ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

**ಅಧ್ಯಯನದ ಉದ್ದೇಶಗಳು**
- ನಗರ ಸಭೆಯಲ್ಲಿ ದುಡಿಯುತ್ತಿರುವ ಪೌರ ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ-ಗತಿಯನ್ನು ವಿಶ್ಲೇಷಿಸುವುದು.
- ಸ್ವಚ್ಚತಾ ಕಾರ್ಯದಲ್ಲಿ ದುಡಿಯುತ್ತಿರುವ ಪೌರ ಕಾರ್ಮಿಕರ ಸಮಸ್ಯೆಗಳನ್ನು ವಿಶ್ಲೇಷಿಸುವುದು.
- ಪೌರ ಕಾರ್ಮಿಕರ ಹಿತಾಸಕ್ತಿಗಾಗಿ ಇರುವ ಸೌಲಭ್ಯಗಳನ್ನು ತಿಳಿಯುವುದು.
- ಪೌರ ಕಾರ್ಮಿಕರ ಆರೋಗ್ಯ ಸ್ಥಿತಿ ತಿಳಿಯುವುದು.

**ಪೌರ ಕಾರ್ಮಿಕರು**
ನಗರದ ಸ್ವಚ್ಚತಾ ಕಾರ್ಯದಲ್ಲಿ ಪೌರಕಾರ್ಮಿಕರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ,

ಪೌರಕಾರ್ಮಿಕರು ಎಂದರೆ ಯಾರು ಎಂಬುದನ್ನು ಈ ಕೆಳಗಿನ ವ್ಯಾಖ್ಯಾನಗಳ ಮೂಲಕ ತಿಳಿದು ಕೊಳ್ಳಬಹುದು.ಹರಪ್ಪ ಮತ್ತು ಮೆಹೆಂಜೋದಾರೋ ನಾಗರೀಕತೆಯಲ್ಲಿ ಶೌಚಾಲಯಗಳು ಅಸ್ಥಿತ್ವದಲ್ಲಿದ್ದಿದ್ದು ಸಾಕ್ಷಾದಾರವಾಗಿ ನಿರ್ಧಾರವಾಗಿದೆ. ಈ ನಗರಗಳ ಶೌಚಾಲಯಗಳು ಒಳ ಚರಂಡಿ ವ್ಯವಸ್ಥೆಗೆ ಜೋಡಣೆ ಮಾಡಲಾಗಿತ್ತು.ತದ ನಂತರದಲ್ಲಿ ಪೌರ ಕಾರ್ಮಿಕ ವೃತ್ತಿಯೂ ಜಾತಿ ಆಧಾರಿತ ವೃತ್ತಿಯಾಗಿ ಮಾರ್ಪಾಡಾಯಿತು.ಅಂದಿನ ಕಾಲದಲ್ಲಿ ಮಹಿಳೆಯರು ಈ ಕಾರ್ಯದಲ್ಲಿ ತೊಡಗಿದ್ದರು.

ಪುರಾತನ ಕಾಲದ ಪವಿತ್ರ ಗ್ರಂಥಗಳು ಮತ್ತು ಇತರ ಸಾಹಿತ್ಯಗಳಲ್ಲಿ ನಿರ್ದಿಷ್ಟ ಜಾತಿಗೆ ಈ ಕೆಲಸವು ಕಾಯ್ದಿರಿಸಲಾಗಿತ್ತು.ನರದಿಯ ಸಂಹಿತಾ ಎಂಬ ಕೃತಿಯಲ್ಲಿ ಪೌರಕಾರ್ಮಿಕರ ಬಗ್ಗೆ ವರ್ಣಿಸಲಾಗಿದೆ.ಇದು ಬುದ್ಧ ಮತ್ತು ಮೌರ್ಯರ ಕಾಲದ್ದಾಗಿದೆ (1556).

ಪ್ರಸ್ತುತ ಮಂಡ್ಯ ನಗರದಲ್ಲಿ ಸುಮಾರು 82 ಖಾಯಂ ಪೌರಕಾರ್ಮಿಕರು ಇದ್ದಾರೆ.ಅದರಲ್ಲಿ 50 ಪುರುಷ ಪೌರಕಾರ್ಮಿಕರು ಹಾಗೂ 32 ಮಹಿಳಾ ಪೌರಕಾರ್ಮಿಕರು ಇದ್ದಾರೆ.176 ಹೊರ ಗುತ್ತಿಗೆ ಪೌರಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ.ಇವರ ವೇತನ ಶ್ರೇಣಿ 9.600-14.650.04/08/2006 ರ ಕನಿಷ್ಟ ವೇತನ ಕಾರ್ಮಿಕ ಇಲಾಖೆ.ಕರ್ನಾಟಕ ಸರ್ಕಾರ ಹೊರಗುತ್ತಿಗೆ ಪೌರಕಾರ್ಮಿಕರಿಗೆ ತಿಂಗಳಿಗೆ 13.650 ರೂ ವೇತನವನ್ನು ನೀಡುತ್ತದೆ.ಇದರ ಜೊತೆಯಲ್ಲಿ ಇ.ಎಸ್.ಐ. ಪಿ.ಎಫ್.18.36% ರಷ್ಟು ನೀಡಲಾಗುತ್ತಿದೆ ಇವರ ಹಿತಾಶಕ್ತಿಯನ್ನು ಹೆಚ್ಚಿಸುವ ಸಲುವಾಗಿ ಕ್ವಾಟ್ರಸ್‌ಗಳನ್ನು ನೀಡಲಾಗಿದೆ.

ಕೇಂದ್ರದ ನಗರಾಭಿವೃದ್ಧಿ ಸಚಿವಾಲಯದ ಕ್ವಾಲಿಡಿ ಕೌನ್ಸಿಲ್ ಆಫ್ ಇಂಡಿಯಾ ನಡೆಸಿದ ದೇಶದ ಸ್ವಚ್ಛ ನಗರಗಳ ಪೈಕಿ ಮಂಡ್ಯ ನಗರವು 148ನೇ ಸ್ಥಾನವನ್ನು ಪಡೆದಿದೆ.ಕಳೆದಬಾರಿ ರಾಜ್ಯದಲ್ಲಿ 6ನೇ ಸ್ಥಾನದಲ್ಲಿದ್ದ ಜಿಲ್ಲೆ ಈ ಸಾಲಿನಲ್ಲಿ 5ನೇ ಸ್ಥಾನಕ್ಕೆ ಏರಿದೆ.ಆದರೆ ದೇಶದ ಇತರೆ ನಗರಗಳಿಗೆ ಹೋಲಿಸಿದರೆ ಸ್ವಚ್ಛತೆಯಲ್ಲಿ ಹಿಂದೆಯೇ ಇದೆ.

2015ರಲ್ಲಿ ನಡೆದ ಮೊದಲ ಸಮೀಕ್ಷೆಯಲ್ಲಿ 15ನೇ ಸ್ಥಾನ ಪಡೆದಿದ್ದ ಮಂಡ್ಯ ನಗರ 2016ರಲ್ಲಿ 6ನೇ ಸ್ಥಾನ ಪಡೆದಿದೆ.ಈ ವರ್ಷ 5ನೇ ಸ್ಥಾನಕ್ಕೆ ಏರಿರುವುದು ನಗರವಾಸಿಗಳಿಗೆ ಖುಷಿ ತಂದಿದೆ.ಮುಂದಿನ ವರ್ಷದ ಸಮೀಕ್ಷೆಯಲ್ಲಿ ದೇಶದ 100 ನಗರಗಳ ಪಟ್ಟಿಯಲ್ಲಿ ಸ್ಥಾನ ಪಡೆಯುವ ಆಲೋಚನೆಯು ನಗರ ಸಭೆಯದಾಗಿದೆ ಎನ್ನಬಹುದು.

- ಪೌರ ಕಾರ್ಮಿಕರು ಎಂದರೆ ತ್ಯಾಜ್ಯಾ ವಸ್ತುಗಳನ್ನು ಸಂಗ್ರಹ ವಹಿಸುವ ಮತ್ತು ಒಟ್ಟುಗೂಡಿಸುವ ವ್ಯಕ್ತಿಯೇ ಪೌರ ಕಾರ್ಮಿಕರು.
- ಭಾರತೀಯ ಕಾನೂನು ಕಾಯ್ದೆ 1993ರ ಪ್ರಕಾರ ಪೌರ ಕಾರ್ಮಿಕರು ಎಂದರೆ ಸ್ಥಳೀಯ ಸರ್ಕಾರ ವಯಕ್ತಿಕವಾಗಿ ಏಜೆನ್ಸಿ ಅಥವಾ ಗುತ್ತಿಗೆ ಆಧಾರದ ಮೇಲೆ ಮಲ ಹೊರುವ ಸ್ವಚ್ಛತೆಗೊಳಿಸುವ ಅದನ್ನು ಮತ್ತೊಂದು ಕಡೆ ಹಾಕುವ ಕಾರ್ಯದಲ್ಲಿ ತೊಡಗಿರುವ ವ್ಯಕ್ತಿಯನ್ನು ಪೌರ ಕಾರ್ಮಿಕ ಎನ್ನಲಾಗಿದೆ.
- ಅಂತರ್ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು (ಐ.ಎಲ್.ಓ) ಪೌರ ಕಾರ್ಮಿಕರನ್ನು ಮೂರು ಬಗೆಯಲ್ಲಿ ವಿವರಿಸಲಾಗಿದೆ.

1. ಸಾರ್ವಜನಿಕ ಶೌಚಾಲಯುಗಳನ್ನು ಸ್ವಚ್ಛಗೊಳಿಸುವವರು.
2. ರೊಚ್ಚು ತೊಟ್ಟಿಗಳನ್ನು ಶುದ್ಧಿಗೊಳಿಸುವವರು.
3. ಸೂರು ದೋಣಿಗಳನ್ನು ಮತ್ತು ಒಳ ಚರಂಡಿಗಳನ್ನು ಸ್ವಚ್ಛಗೊಳಿಸುವವರು.

ಈ ಮೇಲ್ಕಂಡಂತೆ ತಿಳಿಸಿರುವ ವ್ಯಾಖ್ಯಾನಗಳ ಮೂಲಕ ಪೌರ ಕಾರ್ಮಿಕರು ಎಂದರೇ ಯಾರು ಎಂಬುದನ್ನು ತಿಳಿದುಕೊಳ್ಳಲಾಗಿದೆ.

ಮಂಡ್ಯ ನಗರದಲ್ಲಿ 258 ಪೌರಕಾರ್ಮಿಕರು ಇರುವುದನ್ನು ಕಾಣಬಹುದು.ಅದರಲ್ಲಿ ಸುಮಾರು 176 ಹೊರ ಗುತ್ತಿಗೆ ಪೌರ ಕಾರ್ಮಿಕರುಸುಮಾರು 82 ಖಾಯಂ ಪೌರಕಾರ್ಮಿಕರು ಇದ್ದಾರೆ.ಅದರಲ್ಲಿ 50 ಪುರುಷ ಪೌರಕಾರ್ಮಿಕರು ಹಾಗೂ 32 ಮಹಿಳಾ ಪೌರಕಾರ್ಮಿಕರು ಇದ್ದಾರೆ.176 ಹೊರ ಗುತ್ತಿಗೆ ಪೌರಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ.ಇವರ ವೇತನ ಶ್ರೇಣಿ 9.600-14.650.04/08/2006 ರ ಕನಿಷ್ಟ ವೇತನ ಕಾರ್ಮಿಕ ಇಲಾಖೆ.ಕರ್ನಾಟಕ ಸರ್ಕಾರ ಹೊರಗುತ್ತಿಗೆ ಪೌರಕಾರ್ಮಿಕರಿಗೆ ತಿಂಗಳಿಗೆ 13.650 ರೂ ವೇತನವನ್ನು ನೀಡುತ್ತದೆ.ಇದರ ಜೊತೆಯಲ್ಲಿ ಇ.ಎಸ್.ಐ. ಪಿ.ಎಫ್.18.36% ರಷ್ಟು ನೀಡಲಾಗುತ್ತಿದೆ ಇವರ ಹಿತಾಶಕ್ತಿಯನ್ನು ಹೆಚ್ಚಿಸುವ ಸಲುವಾಗಿ ಕ್ವಾಟ್ರಸ್‌ಗಳನ್ನು ನೀಡಲಾಗಿದೆ.

ಪೌರ ಕಾರ್ಮಿಕರಿಗೆ ಬೆಳಗಿನ ಉಪ ಆಹಾರವನ್ನು ನೀಡಲಾಗುತ್ತಿದೆ.ದಿನಕ್ಕೆ 8 ಗಂಟೆಗಳ ಕಾಲ ಸ್ವಚ್ಛತಾ ಕಾರ್ಯವನ್ನು ಮಾಡುವುದರಲ್ಲಿ ನಗರವನ್ನು ಶುಚಿತ್ವ ಗೊಳಿಸುತ್ತಿದ್ದಾರೆ.ಅವರಿಗೆ ಗಮ್ ಬೂಟ್, ಮಾಸ್ಕ್, ಸಮವಸ್ತ್ರ, ಗ್ಲೌಸ್ ಸೇರಿದಂತೆ ಅಗತ್ಯ ರಕ್ಷಣಾ ಪರಿಕರಗಳನ್ನು ನೀಡಲಾಗುತ್ತಿದೆ.ವರ್ಷಕ್ಕೊಮ್ಮೆ ಪೌರ ಕಾರ್ಮಿಕರು ಮತ್ತವರ ಕುಟುಂಬದ ಆರೋಗ್ಯ ತಪಾಸಣೆ ನಡೆಸಿ ಉಚಿತವಾಗಿ ಔಷಧೋಪಚಾರ ಮಾಡಲಾಗುತ್ತಿದೆ. ವಿಶೇಷವಾಗಿ ಎಲ್ಲಾ ಪೌರ ಕಾರ್ಮಿಕರಿಗೆ ನಗರ ಸಭೆಯಿಂದ ಹೈಪಟೈಟಿಸ್-ಬಿ ಚುಚ್ಚುಮದ್ದು ಕೊಡಿಸಲಾಗುತ್ತಿದೆ.ಪೌರ ಕಾರ್ಮಿಕರ ಪತ್ನಿಯ ಜೊತೆಗೆ ಪತಿಗೆ ಹಾಗೂ ಪೌರ ಕಾರ್ಮಿಕ ಪತಿಯ ಜೊತೆಗೂ ಪತ್ನಿಗೂ ಚುಚ್ಚು ಮದ್ದು ಹಾಕಲಾಗುತ್ತಿದೆ.ವರ್ಷಕ್ಕೆ ಅವರ ಮಕ್ಕಳಿಗೆ ಉಚಿತ ಲ್ಯಾಪ್‌ಟಾಪ್ ಮತ್ತು ಸ್ಕಾಲರ್‌ಶಿಪ್ ನೀಡುತ್ತದೆ.

ಪೌರ ಕಾರ್ಮಿಕರಿಗೆ ದಿನದ ಹಾಜರಾತಿಯು ಇರುತ್ತದೆ. ಅದರಲ್ಲಿ ಬಯೋಮೆಟ್ರಿಕ್ (ಬೆರಳುಗಳು) ಮೂಲಕ ಹಾಜರಾತಿಯನ್ನು ಕಾಣಬಹುದು.ಇವರಿಗೆ ವೇತನವನ್ನು ಬ್ಯಾಂಕ್‌ಗಳ ಮೂಲಕ ಕೊಡುತ್ತಾರೆ.ಇವರು ಗೈರುಹಾಜರಿ ಆದರೆ ಆ ದಿನದ ಸಂಬಳವನ್ನು ಕಡಿತಗೊಳಿಸುತ್ತಾರೆ.ಇವರಿಗೆ ವರ್ಷಕ್ಕೆ 15 ಸಾಂಧರ್ಭಿಕ ರಜೆ, 20 ಪರಿವರ್ತಿತ ರಜೆ, 15 ಗಳಿಕೆ ರಜೆಗಳು ಇವೆ.

ಪೌರ ಕಾರ್ಮಿಕರುಗಳಲ್ಲಿ ಮೊದಲು ಮಲ ಹೊರುವ ಪದ್ಧತಿಯೂ ಇತ್ತು.ಆದರೆ ಈಗ ಇಲ್ಲ ಆ ಕೆಲಸಗಳನ್ನು ಮಾಡಲು ಮಿಷನ್‌ಗಳನ್ನು ಬಳಸುತ್ತಿದ್ದಾರೆ.ಅವುಗಳಲ್ಲಿ 11 ಆಟೋ ಟಿಪ್ಪರ್‌ಗಳ ಮೂಲಕ ಮನೆ ಮನೆಯಿಂದ ಕಸ ಸಂಗ್ರಹಿಸಿ ಅದನ್ನು ಕಾಳೇನಹಳ್ಳಿಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ವಿಂಗಡಿಸಿ ವಿಲೇ ಮಾಡಲಾಗುತ್ತಿದೆ.ಈ ಕೆಲಸಕ್ಕಾಗಿ ಇನ್ನೂ 9 ಆಟೋ ಟಿಪ್ಪರ್‌ಗಳನ್ನು ಖರೀದಿಸಲಾಗಿದೆ. ನಗರದ 35 ವಾರ್ಡ್‌ಗಳ ಪೈಕಿ 25 ವಾರ್ಡ್‌ಗಳಲ್ಲಿ ಹೊರಗುತ್ತಿಗೆಯವರಿಂದ 7 ಟ್ರಾಕ್ಟರ್‌ಗಳಲ್ಲಿ ಕಸ ವಿಲೇವಾರಿ ಮಾಡಿಸಲಾಗುತ್ತಿದೆ.ಉಳಿದ 10 ವಾರ್ಡ್‌ಗಳ ಕಸವನ್ನು ನಗರ ಸಭೆಯಿಂದಲೇ 3 ಟ್ರಾಕ್ಟರ್, 1 ಲಾರಿ ಟಿಪ್ಪರ್ ಮೂಲಕ ವಿಲೇ ಮಾಡಲಾಗುತ್ತಿದೆ. 2 ಜೆಸಿಬಿ ಯಂತ್ರ, 1 ಆಟೋಮ್ಯಾಟಿಕ್ ಸ್ಟ್ರೇಯಿಂಗ್ ಮೀಷನ್ ವಾಹನ, 1 ಕಮ್ ಜಟ್ಟಿಂಗ್ ಯಂತ್ರಗಳು ಇವೆ. ಈ ಎಲ್ಲಾ ರೀತಿಯ ಯಂತ್ರಗಳನ್ನು ಬಳಸಿಕೊಂಡು ನಗರದ ಶುಚಿತ್ವವನ್ನು ಪೌರಕಾರ್ಮಿಕರು ಕಾಪಾಡುತ್ತಿದ್ದಾರೆ.

ಪೌರ ಕಾರ್ಮಿಕರು ಹಲವಾರು ಸಮಸ್ಯೆಗಳಿಂದ ಬಳಲುತ್ತಾರೆ.ಬೇರೆ ದೇಶಗಳಿಗೆ ಹೋಲಿಸಿಕೊಂಡರೆ ನಮ್ಮ ದೇಶದ ಪೌರಕಾರ್ಮಿಕರ ಜೀವನ ಮಟ್ಟ ಹಾಗೂ ಸಾಮಾಜಿಕ ಸ್ಥಿತಿ ಗತಿ ತುಂಬಾ ಕೆಳಸ್ಥರದಲ್ಲಿದೆ. ಪೌರ ಅನಕ್ಷರತೆ ಮತ್ತು ಅಜ್ಞಾನ, ಬಡತನ,ಅನಾರೋಗ್ಯ,ನಿಕೃಷ್ಟ ಜೀವನ ಮಟ್ಟ, ಕಡಿಮೆ ವೇತನ,ತರಬೇತಿಯ ಅಭಾವ,ಉಷ್ಣ ಹವಮಾನ, ದುಶ್ಚಟಗಳು, ವಸತಿ ಸಮಸ್ಯೆ, ಅನಾನುಕೂಲಕರ ಕೆಲಸದ ಸ್ಥಿತಿಗತಿಗಳು, ಪೌಷ್ಠಿಕಾಂಶದ ಕೊರತೆ ಮುಂತಾದ ಸಮಸ್ಯೆಗಳಿಂದ

ಬಳಲುತ್ತಿದ್ದಾರೆ.

ಮಂಡ್ಯ ನಗರದ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಪೌರಕಾರ್ಮಿಕರುನಗರದ ಜನರ ಆರೋಗ್ಯವನ್ನು ಕಾಪಾಡುವ್ ಇವರ ಆರೋಗ್ಯ ಸ್ಥಿತಿ ಹದಗೆಡುತ್ತಿರುವ ಬಗ್ಗೆ ಪ್ರಜಾವಾಣಿ ಪತ್ರಿಕೆಯೂ ಸಹ ವರದಿಮಾಡಿತ್ತು.ಹಾಗೆಯೇ ಅವರ ಕೆಲಸದಿಂದ ದೈಹಿಕ ಸದೃಢತೆಯಲ್ಲಿ ಹಿಂದುಳಿದಿದ್ದಾರೆ.ಪೌರಕಾರ್ಮಿಕರ ಚರಂಡಿ ಸ್ವಚ್ಛತಾ ಕಾರ್ಯವು ಶತಮಾನಗಳಿಂದಲೂ ಚರಂಡಿ ಸ್ವಚ್ಛತಾ ಕಾರ್ಯವು ಶತಮಾನಗಳಿಂದಲೂ ನಡೆದು ಬಂದಿದೆ.ಚರಂಡಿ ಮತ್ತು ರೊಚ್ಚು ತೊಟ್ಟಿ ಸ್ವಚ್ಛತೆಯಲ್ಲಿ ತೊಡಗುವಾಗ ಅಲ್ಲಿ ಮಿಥೈನ್ ಮತ್ತು ಹೈಡ್ರೋಜನ್ ಸಲ್ಫೈಡ್ ಆಮ್ಲ ಹೊರ ಬರುವ ಕಾರಣದಿಂದಾಗಿ ಹೆಪಟೈಟಿಸ್, ಲೆಪ್ಟೊ ಸ್ಪಿರೊಸಿಸ್ ಇದು ಬೀದಿ ನಾಯಿಗಳನ್ನು ಮುಟ್ಟುವುದರಿಂದ ಬರುವಂತಹ ಕಾಯಿಲೆ, ಹೆಲಿಕೊಬ್ಯಾಕ್ಟರ್, ಚರ್ಮ ರೋಗಗಳು ಬರುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಮಹಿಳಾ ಪೌರಕಾರ್ಮಿಕರು ಯಾವುದೇ ರಕ್ಷಣಾ ಕವಚಗಳನ್ನು ಬಳಕೆ ಮಾಡದ ಕಾರಣ ಎಣಿಸಲಾಗದಷ್ಟು ಕಾಯಿಲೆಗಳು ಇವರಿಗೆ ಬರುತ್ತದೆ.ಕೆಲವೊಂದನ್ನು ಹೇಳುವುದಾದರೆ ಹೆಪಟೈಟಿಸ್, ಕ್ಷಯರೋಗ, ಕೈ, ಕಾಲು, ಬಾಯಿಗೆ ಸಂಬಂಧ ಪಟ್ಟ ಕಾಯಿಲೆಗಳು ಬರುತ್ತದೆ.ಅದರಲ್ಲೂ ಕಣ್ಣು ಮತ್ತು ಚರ್ಮದ ಕಾಯಿಲೆಗಳಿಂದ ಬಳಲುತ್ತಾರೆ.ಸರ್ಕಾರದಿಂದ ದೊರೆಯುವ ಸಾಧನಗಳು ಉತ್ತಮ ಗುಣಮಟ್ಟವಿಲ್ಲದಿರುವ ಕಾರಣ ಮತ್ತು ಅವರು ಅನಕ್ಷರಸ್ಥರಾಗಿರುವುದರಿಂದ ಆ ಸಾಧನಗಳ ಬಳಕೆ ಅವರಿಗೆ ತಿಳಿದಿರುವುದಿಲ್ಲ. ಆದ್ದರಿಂದ ಅವರು ತಮ್ಮ ಕೈಗಳನ್ನು ಬಳಸಿ ಕೆಲಸ ಮಾಡುವುದರಿಂದ ನಿವೃತ್ತಿ ಹೊಂದುವ ಮೊದಲೇ ಮರಣವನ್ನು ಹೊಂದುತ್ತಾರೆ.

ಸರ್ಕಾರವು ಸ್ವಚ್ಛತೆಗೆ ಕೈಗೊಂಡಿದ್ದಂತಹ ಹಲವಾರು ಕ್ರಮಗಳನ್ನು ಈ ಕೆಳಕಂಡಂತೆ ಕಾಣಬಹುದು: ಈ ಕ್ರಮಗಳನ್ನು ಅನುಸರಿಸಿ ನಗರವನ್ನು ಶುಚಿತ್ವಗೊಳಸುವ ಉದ್ದೇಶವನ್ನು ಹೊಂದಿದೆ. ಆದರೆ ಆರೇಳು ವರ್ಷಗಳ ಹಿಂದೆಯೇ 'ಸ್ವಚ್ಛ ನಗರ' ಯೋಜನೆಗೆ ಆಯ್ಕೆಯಾಗಿರುವ ಮಂಡ್ಯ ನಗರ ಆಗಿನಿಂದಲೇ ಸ್ವಚ್ಛತೆಗೆ ಆದ್ಯತೆ ನೀಡಿದೆ.

1. ಸ್ವಚ್ಛತೆ ಮತ್ತು ಘನತಾಜ್ಯ ವಿಲೇವಾರಿಗೆ ಆದ್ಯತೆ ನೀಡಿತ್ತು.
2. ಕಳೆದೊಂದು ವರ್ಷದಿಂದ ಮನೆ ಮನೆಯಿಂದ ಕಸ ಸಂಗ್ರಹಿಸುವ ಕಾರ್ಯಕ್ರಮವನ್ನು ಆರಂಭಿಸಿತ್ತು.
3. 'ಸ್ವಚ್ಛ ಭಾರತ್ ಮಿಷನ್' ಕಾರ್ಯಕ್ರಮ ಅನುಷ್ಠಾನಕ್ಕೆ ಹೆಚ್ಚಿನ ಆದ್ಯತೆ ನೀಡಿತು.
4. ನಗರದೆಲ್ಲೆಡೆ ಸ್ವಚ್ಛತಾ ಅಭಿಯಾನ ಕಾರ್ಯಕ್ರಮಗಳನ್ನು ಕೈಗೊಂಡು ನಗರವಾಸಿಗಳಲ್ಲಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುತ್ತಿದೆ.
5. ಗೋಡೆ ಬರಹ, ಕರಪತ್ರ ವಿತರಣೆ, ಜಾಗೃತಿ ಜಾಥಾ, ಆಟೋ ಪ್ರಚಾರ, ಬ್ಯಾನರ್, ಫ್ಲೆಕ್ಸ್, ಹೋರ್ಡಿಂಗ್ಸ್ ಮೂಲಕ ಘನತಾಜ್ಯ ವಿಲೇವಾರಿಯ ಪ್ರಚಾರ ಮಾಡಲಾಗುತ್ತದೆ.
6. ಮನೆ ಮನೆಯಿಂದ ಸಂಗ್ರಹ ಮತ್ತು ಸ್ವಚ್ಛತಾ ಕಾರ್ಯಕ್ರಮಗಳ ಮೂಲಕ ಜನರಿಗೆ ಮಾಹಿತಿ ನೀಡುತ್ತದೆ.
7. ಮನೆ ಮನೆಯಿಂದ ಕಸ ಸಂಗ್ರಹಿಸುವ ಆಟೋ ಟಿಪ್ಪರ್‌ಗಳಿಗೆ ಧ್ವನಿವರ್ಧಕಗಳನ್ನು ಅಳವಡಿಸಿ, ಜಾಗೃತಿ ಮತ್ತು ಪರಿಸರ ಗೀತೆಗಳು, ಜನಪದ, ಭಾವಗೀತೆಗಳನ್ನು ಜನರಿಗೆ ಕೇಳಿಸುವ ಮೂಲಕ ಜನರ ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಬೀರುವ ಪ್ರಯತ್ನವನ್ನು ಮಾಡಿದೆ.
8. ಹಸಿ ಮತ್ತು ಒಣ ಕಸವನ್ನು ಮನೆಯಲ್ಲೇ ಪ್ರತ್ಯೇಕಿಸಿ, ಕಸ ಸಂಗ್ರಹಣೆಗೆ ಬರುವ ಪೌರಕಾರ್ಮಿಕರಿಗೆ ನೀಡುವಂತೆ ನಿರಂತರವಾಗಿ ಅರಿವು ಮೂಡಿಸುವುದು.

ಈ ರೀತಿಯ ಕಾರ್ಯಕ್ರಮಗಳಿಂದ ಪೌರಕಾರ್ಮಿಕರನ್ನು ಉತ್ತೇಜಿಸುವ ಮತ್ತು ಅಭಿವೃದ್ಧಿ ಪಡಿಸುವುದರ ಜೊತೆಗೆ ನಗರದ ಜನ ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ಸರ್ಕಾರವು ಸಫಲವಾಗಿರುವುದನ್ನು ನೋಡಬಹುದಾಗಿದೆ.

ನಮ್ಮ ಮಾಹಿತಿದಾರರ ಲಿಂಗ, ವಯಸ್ಸು, ಧರ್ಮ,ವೃತ್ತಿ, ನೆರೆಹೊರೆಯವರ ಒಡನಾಟ, ಕುಟುಂಬವರ್ಗ, ಸಾರ್ವಜನಿಕರ ಪ್ರತಿಕ್ರಿಯೆ ಮಾಹಿತಿಯನ್ನುನ ಈ ಕೆಳಕಂಡಂತಿದೆ.

ಮಾಹಿತಿದಾರರ ವಯೋಗುಂಪಿನ ವಿವರ

| ಕ್ರ. ಸಂ. | ವಯಸ್ಸು | ಆವೃತ್ತಿ | ಶೇಕಡವಾರು |
|---|---|---|---|
| 1 | 20-30 | 15 | 30% |
| 2 | 31-40 | 20 | 40% |
| 3 | 41-50 | 7 | 14% |
| 4 | 51-60 | 8 | 16% |
| 5 | ಒಟ್ಟು | 50 | 100% |

ಅಧ್ಯಯನಕ್ಕೆ ಒಳಪಡಿಸಿದ 50 ಜನ ಪೌರಕಾರ್ಮಿಕರ ವಯೋಗುಂಪಿನ ವಿವರವನ್ನು ತಿಳಿಸುತ್ತದೆ.ಇದರಲ್ಲಿ 33 ಪುರುಷರು ಮತ್ತು 17 ಸ್ತ್ರೀಯರಿದ್ದಾರೆ.ಇವರಲ್ಲಿ 20-30 ರೊಳಗಿನ ವಯಸ್ಸಿನವರಲ್ಲಿ 30% ರಷ್ಟು, 31-40 ರೊಳಗಿನ ವಯಸ್ಸಿನವರಲ್ಲಿ 40% ರಷ್ಟು, 41-50 ರೊಳಗಿನ ವಯಸ್ಸಿನವರಲ್ಲಿ 14% ರಷ್ಟು, 51-60 ರೊಳಗಿನ ವಯಸ್ಸಿನವರಲ್ಲಿ 16% ರಷ್ಟು ಇರುವುದನ್ನು ಕಾಣಬಹುದಾಗಿದೆ.

ಮಾಹಿತಿದಾರರ ಲಿಂಗಾಧಾರಿತ ವರ್ಗೀಕರಣ ವಿವರ

| ಕ್ರ. ಸಂ. | ವಯಸ್ಸು | ಆವೃತ್ತಿ | ಶೇಕಡವಾರು |
|---|---|---|---|
| 1 | ಪುರುಷರು | 33 | 66% |
| 2 | ಮಹಿಳೆಯರು | 17 | 34% |
| 3 | ಒಟ್ಟು | 50 | 100% |

ನಾವು ಅಧ್ಯಯನಕ್ಕೆ ಒಳಪಡಿಸಿದ ಮಾಹಿತಿದಾರರ ಲಿಂಗಾಧಾರಿತ ವರ್ಗೀಕರಣವನ್ನು ತಿಳಿಸುತ್ತದೆ.ಇಲ್ಲಿ ಒಟ್ಟು 50 ಮಾಹಿತಿದಾರರ ಲಿಂಗವಾರು ವಿವರವನ್ನು ತಿಳಿಸುತ್ತದೆ.ಇದರಲ್ಲಿ 66% ಪುರುಷರು ಹಾಗೂ 34 ಮಹಿಳೆಯರಿದ್ದಾರೆ.

ಮಾಹಿತಿದಾರರ ಭಾಷೆಯ ವಿವರ

| ಕ್ರ. ಸಂ. | ಭಾಷೆ | ಆವೃತ್ತಿ | ಶೇಕಡವಾರು |
|---|---|---|---|
| 1 | ತೆಲುಗು | 50 | 100% |
| 2 | ಒಟ್ಟು | 50 | 100% |

ನಾವು ಅಧ್ಯಯನ ಮಾಡಿದ ಮಾಹಿತಿದಾರರೆಲ್ಲರೂ ತೆಲಗು ಭಾಷೆಯನ್ನು ಮಾತನಾಡುವವರು ಕಂಡುಬಂದಿದ್ದು, ಇದರಿಂದ ಒಂದು ಸಮುದಾಯವೇ ಹೆಚ್ಚು ಈ ವೃತ್ತಿಯಲ್ಲಿ ತೊಡಗಿರುವುದನ್ನು ಗಮನಿಸಬಹುದು.

ಮಾಹಿತಿದಾರರ ವಿದ್ಯಾರ್ಹತೆಯ ವಿವರ

| ಕ್ರ. ಸಂ. | ವಿದ್ಯಾರ್ಹತೆ | ಆವೃತ್ತಿ | ಶೇಕಡವಾರು |
|---|---|---|---|
| 1 | ಅನಕ್ಷರಸ್ಥರು | 23 | 46% |
| 2 | 1-5 | 7 | 14% |
| 3 | 6-10 | 20 | 40% |
| 4 | ಒಟ್ಟು | 50 | 100% |

ಮಾಹಿತಿದಾರರ ವಿದ್ಯಾರ್ಹತೆಯನ್ನು ತಿಳಿಸುತ್ತದೆ.ಇಲ್ಲಿ ಒಟ್ಟು 50 ಮಾಹಿತಿದಾರರ ವಿದ್ಯಾರ್ಹತೆಯ ವಿವರವನ್ನು ತಿಳಿಸುತ್ತದೆ.46% ರಷ್ಟು ಅನಕ್ಷರಸ್ಥರು, 14% ರಷ್ಟು 1–5ನೇ ತರಗತಿಯನ್ನು, 40% ರಷ್ಟು 6–10ನೇ ತರಗತಿಯ ವಿದ್ಯಾರ್ಹತೆಯನ್ನು ಪಡೆದವರಾಗಿದ್ದಾರೆ.ಬಹುಸಂಖ್ಯಾತ ಪೌರಕಾರ್ಮಿಕರು ಅನಕ್ಷರಸ್ಥರೇ ಹೆಚ್ಚಿರುವುದನ್ನು ಗಮನಿಸಬಹುದು.

ಮಾಹಿತಿದಾರರ ಜಾತಿಯ ವಿವರ

| ಕ್ರ. ಸಂ. | ಜಾತಿ | ಆವೃತ್ತಿ | ಶೇಕಡವಾರು |
|---|---|---|---|
| 1 | ಪರಿಶಿಷ್ಟ ಜಾತಿ | 50 | 100% |
| 2 | ಒಟ್ಟು | 50 | 100% |

ಮಾಹಿತಿದಾರರ ಜಾತಿಯ ವಿವರವನ್ನು ತಿಳಿಸಲಾಗಿದೆ.ಒಟ್ಟು ಮಾಹಿತಿದಾರರಲ್ಲಿ 100% ರಷ್ಟು ಪರಿಶಿಷ್ಟ ಜಾರಿಗೆ ಸೇರಿದವರಾಗಿದ್ದಾರೆ.ಒಂದು ಜಾತಿಯ ಜನರೇ ಹೆಚ್ಚಿರುವುದನ್ನು ಗಮನಿಸಬಹುದು.

ಮಾಹಿತಿದಾರರ ಮದ್ಯಪರ್ಪಾನದ ಹವ್ಯಾಸಗಳ ವಿವರ

| ಕ್ರ. ಸಂ. | ಮದ್ಯಪಾನ ಹವ್ಯಾಸದ ವಿವರ | ಆವೃತ್ತಿ | ಶೇಕಡವಾರು |
|---|---|---|---|
| 1 | ಹೌದು | 30 | 60% |
| 2 | ಇಲ್ಲ | 20 | 40% |
| 3 | ಒಟ್ಟು | 50 | 100% |

ಅಧ್ಯಯನಕ್ಕೆ ಒಳಪಡಿಸಿದ ಮಾಹಿತಿದಾರರಲ್ಲಿ 60% ರಷ್ಟು ಮದ್ಯಪಾನದ ಹವ್ಯಾಸ ಮೈಗೂಡಿಸಿಕೊಂಡಿದ್ದರೆ, 40% ರಷ್ಟು ಕೆಟ್ಟ ಹವ್ಯಾಸಗಳನ್ನು ಹೊಂದಿಲ್ಲವೆಂದು ತಿಳಿಸುತ್ತದೆ.ಬಹುಸಂಖ್ಯಾತ್ಮಕ ಪೌರಕಾರ್ಮಿಕರು ಕೆಲಸದ ಪರಿಸ್ಥಿತಿಯಿಂದ ಮದ್ಯಪಾನ ರೂಢಿಸಿಕೊಂಡಿರುವುದಾಗಿ ತಿಳಿಸಿದ್ದಾರೆ.

ಮಾಹಿತಿದಾರರು ಪೌರ ಕಾರ್ಮಿಕರಾಗಲು ಕಾರಣದ ವಿವರ

| ಕ್ರ. ಸಂ. | ಕಾರಣ | ಆವೃತ್ತಿ | ಶೇಕಡವಾರು |
|---|---|---|---|
| 1 | ಜಾತಿ | 6 | 12% |
| 2 | ಅನಕ್ಷರತೆ | 3 | 6% |
| 3 | ಬಡತನ | 15 | 30% |
| 4 | ವಂಶಪಾರಂಪರ್ಯ | 26 | 52% |
| 5 | ಒಟ್ಟು | 50 | 100% |

ಮಾಹಿತಿದಾರರು ಪೌರ ಕಾರ್ಮಿಕರಾಗಲು ಕಾರಣದ ವಿವರವನ್ನು ತಿಳಿಸುತ್ತದೆ.12% ರಷ್ಟು ಜಾತಿ, 6% ರಷ್ಟು ಅನಕ್ಷರತೆ, 30% ರಷ್ಟು ಬಡತನ, 52% ರಷ್ಟು ವಂಶಪಾರಂಪರ್ಯವಾಗಿ ಪೌರ ಕಾರ್ಮಿಕರಾಗಲು ಕಾರಣವೆಂದು ಈ ಕೋಷ್ಟಕವು ತಿಳಿಸುತ್ತದೆ.

ಮಂಡ್ಯ ನಗರದನಗರಸಭೆ,ಸರ್ಕಾರಿ ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳು,ವಿದ್ಯಾರ್ಥಿ ನಿಲಯ,ಬಸ್ ನಿಲ್ದಾಣ,ರೈಲ್ವೆ ನಿಲ್ದಾಣ ಸಾರ್ವಜನಿಕ ಪ್ರದೇಶಗಳಲ್ಲಿಪೌರಕಾರ್ಮಿಕರು ಸಕ್ರಿಯವಾಗಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿರುವುದರಿಂದ ನಗರವು ಸ್ವಚ್ಚತೆಯಿಂದ ಕೂಡಿದೆ. ನಗರ ನೈರ್ಮಲ್ಯವನ್ನು ಕಾಪಾಡುವುದರಲ್ಲಿ ಪೌರಕಾರ್ಮಿಕರ ಪಾತ್ರವೂ ಅಪಾರವಾಗಿದೆ. ಇತ್ತೀಚಿನ ದಿನಗಳಲ್ಲಿ ನಗರದ ಸ್ವಚ್ಚತೆಯ ಬಗ್ಗೆ ಹೆಚ್ಚು ಗಮನವಹಿಸುತ್ತಿರುವುದು ಹಾಗೂ ಸ್ವಚ್ಚ ಭಾರತ ಆಂದೋಲನ ಕಾರ್ಯಕ್ರಮದ ಅಡಿಯಲ್ಲಿ ಹೆಚ್ಚು ಜನ ಪೌರಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಹಾಗೂ ಅವರ ಕೆಲಸಕ್ಕೆ ಸಮನಾದ ವೇತನವನ್ನು ಪಾವತಿ ಮಾಡಲಾಗಿದೆ. ನಾಗರೀಕತೆಯನ್ನು ಹೆಚ್ಚಿಸುವಲ್ಲಿ ಹಾಗೂ ಬಡಾವಣೆಗಳು ಹಾಗೂ ಇತರೆ ಸರ್ಕಾರಿ ಸ್ಥಳಗಳ ಸ್ವಚ್ಚತೆಯಲ್ಲಿ ಪೌರ ಕಾರ್ಮಿಕರು ಮಹತ್ವದ ಪಾತ್ರ ವಹಿಸುತ್ತದೆ.ಪೌರ ಕಾರ್ಮಿಕ ಹಿತಾಶಕ್ತಿಗಳನ್ನು ಕಾಪಾಡಲು ಕ್ರಮಗಳನ್ನು ತ್ವರಿತಗತಿಯಲ್ಲಿ ಜಾರಿಗೊಳಿಸಬೇಕು.

ಪೌರಕಾರ್ಮಿಕರ ಆರೋಗ್ಯಸ್ಥಿತಿ ಕಾಪಾಡಲು ವಾಸನೆಮುಕ್ತಗೊಳಿಸುವ ರಾಸಯನಿಕ ತಯಾರಿಸಿ ನೀಡಿದರೆ ಅವರ ಕುಡಿತದ ಹವ್ಯಾಸದಿಂದ ಮುಕ್ತಗೊಳಿಸಬಹುದು.ಪೌರಕಾರ್ಮಿಕರು ರಕ್ಷಣಾ ಕವಚಗಳನ್ನು ಕಡ್ಡಾಯವಾಗಿ ಉಪಯೋಗಿಸುವಂತೆ ಅರಿವು ಕಾರ್ಯಕ್ರಮಗಳನ್ನು ಎರ್ಪಡಿಸಬೇಕು.ಈ ವೃತ್ತಿಗೆ ಹೆಚ್ಚಿನ ಸಂಬಳ ನೀಡುವ ಮೂಲಕ ಈ ವೃತ್ತಿಯನ್ನು ಗೌರವಿಸುವ ಮೂಲಕ ಎಲ್ಲಾ ವರ್ಗದ ಜನರನ್ನು ಆಕರ್ಷಿಸುವುದು.ಪೌರ ಕಾರ್ಮಿಕ ಆಧುನಿಕ ಯಂತ್ರಗಳನ್ನು ಒದಗಿಸಬೇಕು.ಪೌರ ಕಾರ್ಮಿಕರಿಗೆ ಮೂಲಭೂತ ಸಲಭ್ಯಗಳನ್ನು ನೀಡುವುದು.ಪೌರ ಕಾರ್ಮಿಕರಿಗೆ ಕಡಿಮೆ ದರದಲ್ಲಿ ಸಾಲ ಸೌಲಭ್ಯವನ್ನು ನೀಡುವುದು.ಗುತ್ತಿಗೆ ಪೌರ ಕಾರ್ಮಿಕರನ್ನು ಖಾಯಂ ಪೌರ ಕಾರ್ಮಿಕರಾಗಿ ನೇಮಕ ಮಾಡಬೇಕು.ಪೌರ ಕಾರ್ಮಿಕರ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವಲ್ಲಿ ಸಹಕರಿಸುವುದು.ಸಾರ್ವಜನಿಕರಲ್ಲಿ ಹೆಚ್ಚು ಅರವು ಮೂಡಿಸುವ ಮೂಲಕ ಇವರಿಗೆ ಸಹಕರಿಸುವಂತೆ ಮಾಡಬೇಕು.

ಪೌರಕಾರ್ಮಿಕರ ಶ್ರಮದಿಂದ ನಗರದ ಸುತ್ತಮುತ್ತಲಿನ ಪರಿಸರವು ಸ್ವಚ್ಚತೆಯಿಂದ ಕೂಡಿದೆಪೌರಕಾರ್ಮಿಕರ ಕೆಲಸಮಾಡುವ ಸಂದರ್ಭದಲ್ಲಿ ರಕ್ಷಣಾ ಕವಚಗಳನ್ನು ನೀಡಿದರು.ಅದನ್ನು ಸರಿಯಾದ ರೀತಿಯಲ್ಲಿ ಬಳಸದೆ ಹಲವಾರು ಖಾಯಿಲೆಗಳು ಬಂದಿದೆ.ಇದು ಅವರ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಮಾಡುತ್ತಿದೆ.ಒಟ್ಟಾರೆಯಾಗಿ ಹೇಳುವುದಾದರೆ ಪೌರಕಾರ್ಮಿಕರು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯಲ್ಲಿ ನಗರ ಸಭೆ ಅಥವಾ ಸ್ಥಳೀಯ ಸರ್ಕಾರ ಮುಖ್ಯ ಪಾತ್ರ ವಹಿಸುತ್ತದೆ.ಅವರಿಗೆ ವಿದ್ಯಾರ್ಹತೆ ಹಾಗೂ ಕೌಶಲ್ಯ ಆಧಾರದ ಮೇಲೆ ಅನೇಕ ಉದ್ಯೋಗವನ್ನು ಸೃಷ್ಟಿಸಿದೆ.ಮಾಹಿತಿದಾ'ರರು ನಾವು ಮಾಡುವ ಕೆಲಸದ ವಾತವರಣ ಅಂದರೆ ಕೆಟ್ಟವಾಸನೆ ಕಾರಣ ಕುಡಿತದ ಹವ್ಯಾಸ ಬೆಳೆಸಿಕೊಂಡಿರುವುದಾಗಿ ತಿಳಿಸಿದ್ದಾರೆ ಹಾಗೂ ಸಾರ್ವಜನಿಕರು ಇವರ ವೃತ್ತಿ ಬಗ್ಗೆ ನೋಡುವ ದೃಷ್ಟಿಯ ಬಗ್ಗೆ ಬೇಸರವ್ಯಕ್ತಪಡಿಸುತ್ತಾರೆ.ಈ ಅಧ್ಯಯನದಿಂದ ಪ್ರಸ್ತುತ ಇವರಲ್ಲಿ ಚಲನೆ ಕಡಿಮೆ ಮಟ್ಟದಲ್ಲಿ ಉಂಟಾಗುತ್ತಿದೆ.ಬಹುಸಂಖ್ಯಾತರು ಪರಿಶಿಷ್ಟ ಜಾತಿಯ ಜನರೇ ಹೆಚ್ಚು ಈ ವೃತ್ತಿಯನ್ನು ಮಾಡುತ್ತಿದ್ದಾರೆ ಹಾಗೂ ವಂಶಪಾರಂಪರ್ಯವಾಗಿ ಈ ವೃತ್ತಿ ಮಾಡುತ್ತಿರುವುದು ಸಂಖ್ಯಾತ್ಮಕವಾಗಿ ಹೆಚ್ಚಿರುವುದು ಕಂಡುಬಂದಿರುತ್ತದೆ.

**ಪರಾಮರ್ಶನ ಗ್ರಂಥ**


1. ಭಾರತದ ಆರ್ಥಿಕ ವ್ಯವಸ್ಥೆ–ಎಚ್ಚಾರ್ಕೆ
2. ನಗರಸಭೆ ಮಾಹಿತಿಗಳು–ಮಂಡ್ಯ.
3. ಅಂತರ್ಜಾಲ ಮಾಹಿತಿ
4. https://www.thehindu.com/news/national/karnataka/70-pourakarmikas-in-mandya-have-health-issues/article4862940.ece. ¢ »AzÀÆ ¥ÀwæPÉ.
5. ಸತೀಶ್‌ಕುಮಾರ್.ಕೆ.ಎಮ್,ಸಿ.ಡಿ. ವೆಂಕಟೇಶ್ 2017 ಸೋಶಿಯೋ ಎಕನಾಮಿಕ್ ಅಂಡ್ ಹೆಲ್ತ್ ಸ್ಟೇಟಸ್ ಆಫ್ ವುಮೆನ್ ಪೌರಕಾರ್ಮಿಕಾಸ್ ಇನ್ ಕರ್ನಾಟಕ. ಯುಮನ್‌ರೈಟ್ಸ್ ಇಂಟರ್‌ನ್ಯಾಶಿನಲ್ ರೀಸರ್ಚಜರ್ನಲ್5 (2)41–44.